ವತಿಯಿಂದ ಕೈಗೆತ್ತಿಕೊಳ್ಳಲಾಗಿದ್ದು ಇವುಗಳು ಸಹ ಭಾವಣಿ ಹಂತಕ್ಕೆ ಬಂದಿರುತ್ತದೆ. ಇನ್ನು 10 ಮನೆಗಳು ಸಂಪರ್ಕ ದಾರಿ ಅಭಾವದಿಂದ ಇದುವರೆವಿಗೂ ಕೈಗೆತ್ತಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈಗ ವಿವಿಧ ಹಂತದಲ್ಲಿರುವ 25 ಮನೆಗಳು ಪೂರ್ಣಗೊಂಡ ನಂತರ ಉಳಿದ 10 ಮನೆಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು. ಏಕೆಂದರೆ ಕಟ್ಟಡ ಸಾಮಾಗ್ರಿಗಳನ್ನು 25 ಮನೆಗಳು ನಿರ್ಮಿಸುವ ನಿವೇಶನದ ಮೂಲಕವೇ ಸಾಗಿಸಬೇಕಾಗಿರುತ್ತದೆ. ಈ ಮಧ್ಯ ಸಧ್ಯ 25 ಮನೆಗಳ ಕಾರ್ಯವನ್ನು ಇದುವರೆವಿಗೂ ಸುಮಾರು 22.00 ಲಕ್ಷಗಳನ್ನು ಖರ್ಚುಮಾಡಲಾಗಿದ್ದು, ಇನ್ನುಳಿದ 25 ಮನೆಗಳನ್ನು 1996ನೇ ವರ್ಷದ ಜೂನ್ ಅಂತ್ಯದಲ್ಲಿ ಪೂರ್ಣಗೊಳಿಸಾಗುವುದೆಂದು ಕಾರ್ಯಪಾಲಕ ಅಭಿಯಂತರರು ವರದಿ ಮಾಡಿರುತ್ತಾರೆ. ಇದುವರೆವಿಗೂ ಕೈಗೆತ್ತಿಕೊಳ್ಳಲು ಆಗದೇ ಇರವ 10 ಮನೆಗಳ ನಿರ್ಮಾಣ ಕಾರ್ಯವನ್ನು ಸಂಬಂಧಪಟ್ಟ ಫಲಾನುಭವಿಗಳ ಮೂಲಕ ಕಾರ್ಯರೂಪಕ್ಕೆ ತರಲು ಉದ್ದೇಶಿಸಲಾಗಿದೆ. ಇದನ್ನು ಆದಷ್ಟು ಬೇಗ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

(ಋ) ಕಾಮ ಕ್ಷೇತ್ರದ ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿ ಕಾರ್ಯಗಳ ಕುಂಠಿತಗೊಂಡಿರುವ ಬಗ್ಗೆ.

ಶ್ರೀ ವಸಂತ ವಿ. ಸಾಲಿಯಾನ(ಕಾಪು ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಕಾಪು ಕ್ಷೇತ್ರದಲ್ಲಿ 1995ರಿಂದ ಹೊಸ ಸರ್ಕಾರ ಬಂದ ನಂತರ ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳು, ಜಿಲ್ಲಾ ಪಂಚಾಯಿತಿ ಕಾಮಗಾರಿಗಳು, ಮಲೆನಾಡು ಅಭಿವೃದ್ಧಿ ಕಾಮಗಾರಿಗಳು, ಮೀನುಗಾರಿಕಾ ಇಲಾಖೆಯ ಅಭಿವೃದ್ಧಿಕಾಮಗಾರಿಗಳು, ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳು ಸ್ಥಗಿತಗೊಂಡಿವೆ. ಈ ಎಲ್ಲಾ ಅಭಿವೃದ್ಧಿ ಕಾಮಗಾರಿಗಳಿಗೆ ಡಾಮರಿನ ಸಿಮೆಂಟಿನ ಮತ್ತು ಕಬ್ಬಿಣದ ಕೊರತೆ ಮತ್ತು ಸೂಕ್ತ ಅನುಧಾನ ಬಿಡುಗಡೆ ಮಾಡದ ಕಾರಣ ಸ್ಥಗಿತಗೊಂಡಿವೆ. ಶಾಸಕರ ಅನುದಾನದ 30 ಲಕ್ಷ ರೂ.ಗಳ ಕಾಮಗಾರಿಗಳು 1995ರಿಂದ 1996ವರೆಗೆ ಪ್ರಾರಂಭವಾಗಲಿಲ್ಲ. ಈ ಬಗ್ಗೆ ಸರ್ಕಾರ ಕೂಡಲೆ ಪರಿಶೀಲಿಸಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ, ಡಾಂಬರ್ ಕಬ್ಬಿಣ, ಸಿಮೆಂಟುಗಳನ್ನು ಒದಗಿಸಿ ಮಳೆಗಾಲ ಪ್ರಾರಂಭವಾಗುವ ಮೊದಲು ಮುಗಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) (ಲೋಕೋಪಯೋಗಿ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

ಮಾನ್ಯ ಸದಸ್ಯರು ಕಾಪು ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳು, ಜಿಲ್ಲಾ ಪಂಚಾಯತ್ ಕಾಮಗಾರಿಗಳು, ಮಲೆನಾಡು ಅಭಿವೃದ್ಧಿ ಕಾಮಗಾರಿಗಳು, ಮೀನುಗಾರಿಕೆ ಇಲಾಖೆ ಅಭಿವೃದ್ಧಿ ಕಾಮಗಾರಿಗಳು, ಸಣ್ಣ ನೀರಾವರಿ ಇಲಾಖೆ ಕಾಮಗಾರಿಗಳು ಸ್ಥಗಿತಗೊಂಡಿದೆ ಎಂದು ಹೇಳಿರುತ್ತಾರೆ. ಈ ವಿಚಾರದಲ್ಲಿ ಜಿಲ್ಲಾ ಪಂಚಾಯತ್‌ನ ಕಾಮಗಾರಿಗಳು ಪಂಚಾಯತರಾಜ್ ಇಲಾಖೆಯ ಆಡಳಿತಾತ್ಮಕ ವ್ಯಾಪ್ತಿಯಲ್ಲಿಯೂ, ಮಲೆನಾಡು ಅಭಿವೃದ್ಧಿ ಕಾಮಗಾರಿಗಳು ಯೋಜನಾ ಇಲಾಖೆಯ ಆಡಳಿತಾತ್ಮಕ ವ್ಯಾಪ್ತಿಯಲ್ಲಿಯೂ, ಮೀನುಗಾರಿಕೆ ಇಲಾಖೆಯ ಕಾಮಗಾರಿಗಳು ಮೀನುಗಾರಿಕೆ

ಇಲಾಖೆಯ ಆಡಳಿತಾತ್ಮಕ ವ್ಯಾಪ್ತಿಯಲ್ಲಿಯೂ ಬರುತ್ತದೆ. ಈ ವಿಚಾರದಲ್ಲಿ ಮಾನ್ಯ ಶಾಸಕರು ಮಂಡಿಸಿರುವ ಸೂಚನೆಯನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಲಾಗುತ್ತಿದೆ.

ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಸಂಬಂಧಪಟ್ಟಂತೆ ದಕ್ಷಿಣ ಕನ್ನಡ ಜಿಲ್ಲೆಯ ಕಾಪು ಕ್ಷೇತ್ರದಲ್ಲಿ 3 ಕಟ್ಟಡ ಕಾಮಗಾರಿಗಳನ್ನು ಹಾಗೂ ವಿಧಾನ ಸಭಾ ಕ್ಷೇತ್ರದ 30.00 ಲಕ್ಷ ರೂ.ಗಳ ರಸ್ತೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ 10 ರಸ್ತೆ ಕಾಮಗಾರಿಗಳನ್ನು 1995-96ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗಿದೆ. ವಿಧಾನ ಸಭಾ ಕ್ಷೇತ್ರದ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ನವೆಂಬರ್ 1995ರಲ್ಲಿ ವಿಶೇಷ ಯೋಜನೆಯಾಗಿ ಹಮ್ಮಿಕೊಳ್ಳಲಾಗಿದ್ದು, ಇತ್ತೀಚೆಗೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಸಾಲಿನಲ್ಲಿ ಒಟ್ಟು 14.50 ಲಕ್ಷ ರೂ.ಗಳ ಅನುದಾನವನ್ನು ಕಾಪು ಕ್ಷೇತ್ರಕ್ಕೆ ನಿಗಧಿಪಡಿಸಿದ್ದು, ಜನವರಿ 1996ರ ಕೊನೆಯ ವೇಳೆಗೆ 10.51 ಲಕ್ಷರೂ.ಗಳ ವೆಚ್ಚವನ್ನು ಮಾಡಲಾಗಿದೆ. ಲೋಕೋಪಯೋಗಿ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವುದಿಲ್ಲ. 150 ಚೀಲ ಸಿಮೆಂಟ್ ಹಾಗೂ 1.5 ಟನ್ ಉಕ್ಕನ್ನು ಕಾಮಗಾರಿಗಾಗಿ ನೀಡಲಾಗಿದೆ. ಇವುಗಳ ಕೊರತೆ ಇರುವುದಿಲ್ಲ. ಡಾಂಬರಿನ ಕಾಮಗಾರಿಗಾಗಿ 80 ಮೆಟ್ರಿಕ್ ಟನ್ ಡಾಂಬರು ಬೇಕಾಗಿದ್ದು, ಡಾಂಬರನ್ನು ಕೊಂಡು ಕೊಳ್ಳುವುದಕ್ಕೆ ಈಗಾಗಲೇ ಮುಂಗಡ ಹಣವನ್ನು ಸಂಬಂಧಪಟ್ಟ ಸರಬರಾಜು ಕಂಪನಿಗೆ ನೀಡಲಾಗಿದ್ದು, ಡಾಂಬರಿನ ಸರಬರಾಜುವಿಗೆ ದಕ್ಷಿಣ ವಲಯ ವ್ಯಾಪ್ತಿಗೆ ಒಳಪಟ್ಟಂತೆ, ಒಟ್ಟು 1600 ಲಕ್ಷ ರೂ.ಗಳ ಮುಂಗಡ ಹಣವನ್ನು ತೈಲ ಕಂಪನಿಗೆ ಡಾಂಬರಿನ ಸರಬರಾಜಿಗಾಗಿ ನೀಡಲಾಗಿದೆ. 1995-96ನೇ ಸಾಲಿನಲ್ಲಿ ನಿಗಧಿಪಡಿಸಿದ ಅನುದಾನವನ್ನು ಪೂರ್ಣವಾಗಿ ಮಾರ್ಚ್ 1996ರ ಒಳಗಾಗಿ ಉಪಯೋಗಿಸಿ ಕೊಳ್ಳಲಾಗುವುದು.

(ಎ) ಶಿಗ್ಗಾಂವ ತಾಲ್ಲೂಕು ಕುನ್ನೂರು ಗ್ರಾಮ ಸರ್ಕಾರ ಪ್ರೌಢಶಾಲೆಗೆ ಸ್ವಂತ ಕಟ್ಟಡ.

ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ ಕ್ಷೇತ್ರ) : ಶಿಗ್ಗಾಂವ್ ತಾಲ್ಲೂಕು ಕುನ್ನೂರು ಗ್ರಾಮದಲ್ಲಿ ಕಳೆದ 3 ವರ್ಷಗಳಿಂದ ಸರ್ಕಾರಿ ಪ್ರೌಢಶಾಲೆ ನಡೆಯುತ್ತಿದೆ. ಸದರಿ ಪ್ರೌಢ ಶಾಲಾ ಕಟ್ಟಡಕ್ಕಾಗಿ ಗ್ರಾಮದ ದಾನಿಗಳಾದ ಶ್ರೀಮಲ್ಲಿಕಾರ್ಜುನಗೌಡ ಹೆಚ್. ಪಾಟೀಲ್ ಇವರು 2 ಎಕರೆ ಜಮೀನನ್ನು ದಾನವಾಗಿ ಕೊಟ್ಟಿದ್ದಾರೆ ಮತ್ತು ಶಾಲೆಗೆ ಅವರ ಹೆಸರನ್ನು ನಾಮಕರಣ ಮಾಡಲು ವಿನಂತಿಸಿದ್ದಾರೆ. ಶಾಲಾ ಕಟ್ಟಡಕ್ಕೆ ನಾಮಕರಣ ಮಾಡಲು ಸರ್ಕಾರದವರು ನಿಗದಿಪಡಿಸಿದ ಹಣವನ್ನು ಜಮೀನಿನ ಕಿಮ್ಮತ್ತು ಸೇರಿ ಭರಿಸಲು ತಯಾರಿದ್ದಾರೆ. ಶಾಲಾ ಸುಧಾರಣಾ ಸಮಿತಿಯಲ್ಲೂ ಈ ಬಗ್ಗೆ ಒಪ್ಪಿಗೆ ನೀಡಲಾಗಿದೆ. ಈ ವಿಚಾರದಲ್ಲಿ ಮಾನ್ಯ ಶಿಕ್ಷಣ ಸಚಿವರು ಧಾರವಾಡ ಜಿಲ್ಲಾ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡುವ ಹೇಳಿಕೆಯನ್ನು ಸದನದಲ್ಲಿ ನೀಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಸ್. ಎಂ. ನಬಿ (ಸಣ್ಣ ಕೈಗಾರಿಕೆ ಸಚಿವರು) (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಯಾವುದೇ ದಾನಿಗಳ ಹೆಸರನ್ನು ಶಾಲಾ ಕಟ್ಟಡಕ್ಕೆ ಇಡಲು ಕಟ್ಟಡದ ಅಂದಾಜು ವೆಚ್ಚದ 1/3 ಭಾಗವನ್ನು ದಾನಿಗಳು ಭರಿಸಬೇಕಾಗುತ್ತದೆ.